ಅವನದಾಗಿರುವುದಿಲ್ಲ. ಅದು ಬೇರೆ ಬ್ರಾಹ್ಮಣಾರ್ಥದ ಊಟ ಉಂಡು ಅಲ್ಲಿ ಸಿಗುವ ದಕ್ಷಿಣೆಯಲ್ಲಿಯೇ ದಿನ ದೂಡಬೇಕಿದ್ದ ವೆಂಕಪ್ಪಯ್ಯ ಮತ್ತು ಅವರ ಕುಟುಂಬಕ್ಕೆ ಪ್ರಪಂಚ ಅದೆಷ್ಟು ದೊಡ್ಡದಿದ್ದೀತು.

ಬೆಳೆಯುವ ಮಕ್ಕಳಿಗೆ ಹಾಲು ಹಣ್ಣುಗಳನ್ನು ಕೊಡಬೇಕೆಂಬುದನ್ನು ಕೇಳಿಯೂ ಅರಿಯದಂತಹ ಕಾಲ. ಆದರೂ ಮಕ್ಕಳ ಮೇಲಿನ ಮಮಕಾರ. ಸಿದ್ದೆ ಸೊಲಿಗೆ ಹಾಲು ಕೊಡುತ್ತಿದ್ದ ಹಟ್ಟಿಯಲ್ಲಿನ ದನ ಬತ್ತಿ ನಿಂತಿರುತ್ತಿದ್ದುದೇ ಹೆಚ್ಚು. ಕರೆದರೂ ಸಿದ್ದೆಗಿಂತ ಹೆಚ್ಚು ಹಾಲು ಸಿಗದಾಗ ವೆಂಕಪ್ಪಯ್ಯ ಹೇಳಿದ್ದಿತ್ತು 'ನನಗೆ ಕಾಫಿ ಬೇಡ, ಉಷ್ಣವಾಗುತ್ತದೆ... ಮಕ್ಕಳಿಗೆ ಹಾಲು ಕೊಡು' ಎಂದು. ಹೆಂಡತಿಗೆ ತಿಳಿಯದ ಗುಟ್ಟೇನಲ್ಲ ಅದು. ಹಣ್ಣುಗಳೆಂದರೆ ದೂರದ ಊರಿಂದ ಬ್ರಾಹ್ಮಣಾರ್ಥದ ಊಟ ಮುಗಿಸಿ ಗುಡ್ಡೆಯ ದಾರಿಯಾಗಿ ಬರುವಾಗ ಬೇಲಿಯ ಪಕ್ಕದಲ್ಲಿ ಬಿದ್ದಿರುತ್ತಿದ್ದ ಗೇರು ಹಣ್ಣುಗಳು ಅಥವಾ ಬೇಸಗೆಯಲ್ಲಿ ಮೇಲ್ಗಡೆ ಹೆಬ್ಬಾರರ ಮನೆಯ ಹಿತ್ತಿಲಿನಲ್ಲಿ ಕೇಳುವವರಿಲ್ಲದೆ ಬಿದ್ದಿರುತ್ತಿದ್ದ ಕಾಗೆ ಅಳಿಲುಗಳು ತಿಂದು ಬಿಟ್ಟ ಮಾವಿನ ಹಣ್ಣುಗಳು. ಅವನ್ನೇ ಜತನದಿಂದ ಹೆಕ್ಕಿ ತಂದು ಮನೆಯ ಎದುರಿನ ಕೆರೆಯ ನೀರಿನಲ್ಲಿ ತಿಕ್ಕಿ ತಿಕ್ಕಿ ತೊಳೆದು ಮಕ್ಕಳಿಗೆ ಕೊಡುತ್ತಿದ್ದರು. ಅವನ್ನು ತಿನ್ನುವಾಗ ಹೊಮ್ಮುತ್ತಿದ್ದ ಮಕ್ಕಳ ಕಣ್ಣಿನಲ್ಲಿನ ಆನಂದ ಅವರನ್ನು ಸಂತೋಷಪಡಿಸುವುದರ ಬದಲು ಕುಗ್ಗಿಸುತ್ತಿತ್ತು. ತಮ್ಮ ಯೋಗ್ಯತೆ ಇಷ್ಟೇ ಆಯಿತಲ್ಲ ಎಂದು ಅಲವತ್ತುಕೊಳ್ಳುತ್ತಿದ್ದರು.

ಹಾಗೆ ಬಡತನ ಅಭ್ಯಾಸವಾಗಿದ್ದ ವೆಂಕಪ್ಪಯ್ಯನ ಮಗ ಈಗ ಶ್ರೀಮಂತನಾಗಿದ್ದಾನೆ. ಆ ಶ್ರೀಮಂತಿಕೆಯನ್ನು ತಾನೂ ಬೇಕಿದ್ದರೆ ಅನುಭವಿಸಬಹುದು ಎನ್ನುವುದರ ಅರಿವಿದೆ ಅವರಿಗೆ. ಆದರೆ ಅಂತಹ ಆಸೆ ಬಂದದ್ದಿಲ್ಲ ಅವರಲ್ಲಿ. ಅತೀ ಕಷ್ಟದ ದಿನಗಳಲ್ಲೂ ಅವರು ಮಗನನ್ನು ಕೇಳಿದವರಲ್ಲ. ಎಲ್ಲೋ ಮನಸ್ಸಿಗೆ ಬಂದರೆ ಅಮ್ಮನನ್ನು ಬಿಡಲು ಬಂದ ಮಗ ಆಕೆಯ ಕೈ ಮೇಲೆ ಒಂದು ಹತ್ತೋ ಇಪ್ಪತ್ತೋ ಹಾಕುತ್ತಿದ್ದ. ಅದೂ ಆ ಹಣವನ್ನು ಹೇಗೆ ಭದ್ರವಾಗಿಡಬೇಕೆಂಬುದನ್ನೂ ಮತ್ತು ಹೇಗೆ ಅಗತ್ಯ ಬಿದ್ದಾಗ ಮಾತ್ರ ಖರ್ಚು ಮಾಡಬೇಕೆಂಬುದನ್ನು ನೂರು ಸಲ ಹೇಳಿ ಎಚ್ಚರಿಸಿ ಹೋಗುತ್ತಿದ್ದ. ಬೇಕಿದ್ದರೆ ವೆಂಕಪ್ಪಯ್ಯ ಆ ಹಣವನ್ನೂ ತೆಗೆದುಕೊಳ್ಳಬಹುದು. ಆದರೆ ಅವರ ಮನಸ್ಸಿನಲ್ಲಿ ಅಂತಹ ಆಸೆ ಉದ್ಭವಿಸಿದ್ದೇ ಇಲ್ಲ.

ಅಂತಹುದೇ ದಿನಗಳಲ್ಲಿ ಒಮ್ಮೆ ಅವರು ಮನಸ್ಸು ಹಿಂಡುತ್ತಿದ್ದರೂ 'ಅಲ್ಲ ಮಾಣಿ ಆ ಹಾಡಿ ಮನೆ ಶೀನಪ್ಪಯ್ಯನ ಮನೆಗೆ ಹೋದಾಗ ಅವನ ಮಗ ಅದೆಲ್ಲೋ ಅಮೆರಿಕದಲ್ಲಿ ಡಾಕ್ಟರಂತೆ. ದೊಡ್ಡ ವ್ಯವಹಾರವಂತೆ. ಈ ನನ್ನ ಬೆನ್ನು ನೋವಿನ ಬಗ್ಗೆ ಅವ ನೋಡಿ ಆಪರೇಶನ್ ಆಗಬೇಕು ಅಂದ. ಇಲ್ಲವೆಂದರೆ ಒಂದೆರಡು ವರ್ಷದಲ್ಲಿ ಪಾರ್ಶ್ವವಾಯು ಬಡಿದರೂ ಬಡಿಯಬಹುದು ಎಂದ ನೋಡು ಎಂದಿದ್ದರು. ಮಗ ಮುಖ ಮುರಿದಂತೆ ಹೇಳಿದ್ದ. ಅವನಿಗೇನು ಗೊತ್ತಾಗುತ್ತದೆ. ಅಮೆರಿಕದ ಕಾಯಿಲೆಗೂ ಇಲ್ಲಿನ ಕಾಯಿಲೆಗೂ ವ್ಯತ್ಯಾಸವಿದೆ. ಅಲ್ಲೇನು ಸಣ್ಣ ಕಾಯಿಲೆಗೂ ಸಾವಿರಾರು ಖರ್ಚು ಮಾಡುತ್ತಾರೆ. ಮತ್ತೆ ಇನ್ಶೂರೆನ್ಸ್ ಕಂಪೆನಿಯಿಂದ ಹಣ ಕಿತ್ತುಕೊಳ್ಳುತ್ತಾರೆ. ಇಲ್ಲಿ ಹಾಗೋ.. ಪ್ರತಿಯೊಂದಕ್ಕೂ ನಾವೇ ಕಕ್ಕಬೇಕು'. ಪಾಪದ ವೆಂಕಪ್ಪಯ್ಯನಿಗೆ ಆ ಇನ್ಶೂರೆನ್ಸ್ ಕಂಪೆನಿಯೊ ಮತ್ತೊಂದೋ ಏನು ಗೊತ್ತು. ಕಷ್ಟ ಕೊಡುತ್ತಿರುವ ಬೆನ್ನು ನೋವು ಮತ್ತು ಅದನ್ನು ಹಾಗೇ ಬಿಟ್ಟರೆ ಬರಬಹುದಾದ ಪಾರ್ಶ್ವವಾಯುವಿಗಷ್ಟೇ ಹೆದರುತ್ತಿದ್ದ ಅವರು ಮಗನ ಮಾತು ಕೇಳಿ ಕುಗ್ಗಿಯೇ ಹೋಗಿದ್ದರು. ಎರಡು ದಿನ ಮೊದಲನೆ ಮಗನ ಕಂಪನಿಯಲ್ಲೇ ಕೆಲಸ ಮಾಡುತ್ತಿದ್ದ ಕೆಳಮನೆ ಚನ್ನಕೇಶವ ಊರಿಗೆ ಬಂದವ ಇವರ ಮಗನ ತಿಳುವಳಿಕೆ, ಕಂಪನಿಯಲ್ಲಿ ಇವನ ಅಂತಸ್ತು ಮತ್ತು ಸಂಬಳಗಳ ಬಗ್ಗೆ ಹೊಗಳಿಯೇ ಹೊಗಳಿದ್ದ. ಅಂತಹ ಆದಾಯವಿರುವವನಿಗೆ ಇವರ ಆಪರೇಶನ್ನಿಗೆ ತಗಲಬಹುದಾದ ಹತ್ತಿಪ್ಪತ್ತು ಸಾವಿರ ಖಂಡಿತ ಲೆಕ್ಕವಲ್ಲ ಎಂದೂ ಸೇರಿಸಿದ್ದ. ಅಂತಹುದರಲ್ಲಿ ಒಂದು ಚಿಕ್ಕ ಆಪರೇಶನ್‌ನ ಬಗ್ಗೆ ಮಗನಲ್ಲಿ ಹೇಳಿಕೊಳ್ಳದೆ ಇನ್ನು ಯಾರಲ್ಲಿ ಹೇಳಿಕೊಳ್ಳುವುದೆಂದು ಕೇಳಿದ್ದರು. ಆದರೆ ಮಗನ ಉತ್ತರ ಮತ್ತು ಆ ಉತ್ತರದ ಧಾಟಿ ಇವರನ್ನು ಭೂಮಿಗಿಳಿಸಿತ್ತು. ಗೋಡೆಯತ್ತ ತಿರುಗಿದ ವೆಂಕಪ್ಪಯ್ಯ ಮಾತಾಡಿರಲಿಲ್ಲ. ಅವರ ಕಣ್ಣಲ್ಲಿ ನೀರೂ ಬರಲಿಲ್ಲ. ಗೋಡೆಯ ಮೇಲೆ ಮಾತ್ರ ಅಸ್ಪಷ್ಟ ಚಿತ್ರ ಮೂಡಿಬರುತ್ತಿತ್ತು.

***

ಮಾಣಿ ಚಿಕ್ಕವನಿದ್ದ ಆಗ. ಮಾಮೂಲಿ ಬ್ರಾಹ್ಮಣಾರ್ಥದ ಊಟ ಮುಗಿಸಿ ಸುಮಾರು ಹತ್ತು ಮೈಲಿ ನಡೆದು ಅವರು ಮನೆ ತಲುಪುವಾಗ ದೀಪ ಹಚ್ಚುವ ಹೊತ್ತು. ಊಟ ಮಾಡುವಾಗ ಎಡಗೈಯ್ಯಲ್ಲಿ ಹಿಡಿದಿದ್ದ ಕಜ್ಜಾಯದ ಚೂರುಗಳನ್ನು ಆಸೆಯಿಂದ ಕಾಯುತ್ತಿದ್ದ ಮಕ್ಕಳ ಕೈಮೇಲೆ ಹಾಕುವ ಆತುರದಿಂದ ಮನೆಯೊಳಗೆ ಕಾಲಿಟ್ಟರೆ ಹರಕು ಕಂಬಳಿ ಹೊದ್ದು ಮುರುಟಿಕೊಂಡು ನಡುಗುತ್ತ ಮಲಗಿದ್ದ ಈ ಮಾಣಿ. ಹೆಂಡತಿ ಕಷಾಯ ಕಾಯಿಸುತ್ತಿದ್ದಳು. ಮಗಳು ಹೆದರಿ ಮೂಲೆಯಲ್ಲಿ ಕುಳಿತಿತ್ತು. ಬ್ರಾಹ್ಮಣಾರ್ಥದ ಗಂಟನ್ನು ಅಲ್ಲೇ ಬಿಸುಟು ಮಾಣಿಯ ಹಣೆ ಮುಟ್ಟಿದರೆ ಕೈ ಸುಡುವಷ್ಟು ಬಿಸಿ. ಯೋಚಿಸಲು ಪುರುಸೊತ್ತಿಲ್ಲ. ತಡ ಮಾಡಿದರೆ ಮೂರು ಮೈಲಿ ದೂರದಲ್ಲಿರುವ ಒಬ್ಬರೇ ಡಾಕ್ಟರು ಸೈಕಲು ಹತ್ತಿ ಆರು ಮೈಲು ದೂರದಲ್ಲಿರುವ ಅವರೂರಿಗೆ ಹೋಗಿಯೇ ಬಿಡುತ್ತಾರೆ. ಹಾಗೆಯೇ ಎರಡೂ ಕೈಗಳಲ್ಲಿ ಮಾಣಿಯನ್ನು ಎತ್ತಿದ ಅವರು ಜೋಕಾಲಿಯಂತೆ ಹಿಡಿದುಕೊಂಡು ಓಡುತ್ತಲೇ ಹೋಗಿದ್ದರು. ಡಾಕ್ಟರು ಬಾಗಿಲು ಹಾಕುವ ಹೊತ್ತು. ಔಷಧ ಕೊಟ್ಟು ವೆಂಕಪ್ಪಯ್ಯ ಸೊಂಟದ ಗಂಟಿನಿಂದ ಬಿಡಿಸಿ ಕೊಟ್ಟ ಬ್ರಾಹ್ಮಣಾರ್ಥದ ದಕ್ಷಿಣೆಯ ದುಡ್ಡನ್ನು ತೆಗೆದುಕೊಳ್ಳುತ್ತ ಹೇಳಿದ್ದರು– 'ನಿಮ್ಮ ಸಾಹಸ ದೊಡ್ಡದು ವೆಂಕಪ್ಪಯ್ಯನವರೆ. ಇವತ್ತೇ ಕರೆದುಕೊಂಡು ಬಂದು ಒಳ್ಳೆಯದು ಮಾಡಿದಿರಿ. ಇನ್ನೊಂದು ದಿನ ತಡೆದಿದ್ದರೂ ಕಷ್ಟವೇ'. ಡಾಕ್ಟರ ಕಡೆಗೆ ಕೃತಜ್ಞತೆಯ ನೋಟವೊಂದನ್ನು ಬೀರಿದ ವೆಂಕಪ್ಪಯ್ಯ ಒಂದೂ ಮಾತನಾಡದೆ ಅದೇ ತೆರನಲ್ಲಿ ಮಾಣಿಯನ್ನು ಕೈಯ್ಯ ಉಯ್ಯಾಲೆಯಲ್ಲಿ ಹಿಡಿದುಕೊಂಡು ಮರಳಿದ್ದರು. ಮನೆ ತಲಪುವಾಗ ಗಂಟೆ ದೇವರಿಗೇ ಗೊತ್ತು. ಮಗಳು ಮತ್ತು ಹೆಂಡತಿ ಕಾಯುತ್ತ ಕುಳಿತಿದ್ದರು. ಮಾಣಿ ಬಚಾವಾಗಿದ್ದ.

ಡಾಕ್ಟರು ಅಂದು ಹೇಳಿದ್ದ ಮಾತು ವೆಂಕಪ್ಪಯ್ಯನ ಕಿವಿಯಲ್ಲಿ ಗುಂಯ್‌ಗುಡುತ್ತಲೇ ಇತ್ತು. 'ಗೋಡೆಗೆ ಬಾಯಿ ಇದ್ದಿದ್ದರೆ' ಆ ಕಥೆಯನ್ನು ಹೇಳುತ್ತಿತ್ತೇನೊ. ಅದೇ ಗೋಡೆಯ ಬದಿಯಲ್ಲಿ ಮಲಗಿದ್ದ ಮಗನನ್ನು ಎತ್ತಿಕೊಂಡು ಹೋಗಿದ್ದು ಮತ್ತು ಪುನಃ ತಂದು ಮಲಗಿಸಿದ್ದು. ಅವರಿಗೆ ಮಗನ ಹತ್ತಿರ ಮಾತು ಮುಂದುವರಿಸಬೇಕು ಎನ್ನಿಸಲಿಲ್ಲ. ತಲೆ ಕೆಳಗೆ ಹಾಕಿಕೊಂಡು ಹೋಗಿದ್ದರು. ಮಗನೂ ಮಾತಾಡಲಿಲ್ಲ. ಮಧ್ಯಾಹ್ನ ಊಟದ ಶಾಸ್ತ್ರ ಮಾಡಿ ಬಸ್ಸಿಗೆ ಹೋಗಿಯೇ ಬಿಟ್ಟಿದ್ದ.

***

ಆ ಚಿಕ್ಕ ಮನೆಯ ತುಂಬ ಒಬ್ಬರೇ ಇರುವಾಗ ಮಾಡಲು ಕೆಲಸವೂ ಬೇರೆ ಇಲ್ಲದಾಗ ಇದೆಲ್ಲ ನೆನಪಾಗುತ್ತದೆ. ಮಗಳೆಲ್ಲಾದರೂ ಅಪರೂಪಕ್ಕೆ ಬಂದರೆ ಒಂದೆರಡು ದಿನ ಇರುತ್ತಾಳೆ. ಅವಳದ್ದೂ ಅಂತಹ ಅನುಕೂಲದ ಸಂಸಾರವಲ್ಲ. ಬ್ರಾಹ್ಮಣಾರ್ಥದ ಕೂಳಿಗೆ ಹೋಗುವವನ ಮಗಳಿಗೆ ರಾಜಕುಮಾರನ ನೆಂಟಸ್ತನ ಸಿಗುತ್ತದೆಯೇ. ಎಲ್ಲಿಯೋ ಹೋಟೆಲಿನಲ್ಲಿ ಕೆಲಸ ಮಾಡಿಕೊಂಡಿದ್ದವನಿಗೆ ಕಟ್ಟಿ ಕೊಟ್ಟಿದ್ದರು ಮಗಳ ಅದೃಷ್ಟ ಚೆನ್ನಾಗಿದ್ದರೆ ಮುಂದೆ ಬರುತ್ತಾನೆ ಎಂದು. ಆದರೆ ಅವಳು ವೆಂಕಪ್ಪಯ್ಯನ ಮಗಳು. ಅವಳ ಅದೃಷ್ಟವೂ ಅಷ್ಟೆಯೇ. ಕಷ್ಟಪಡುತ್ತಿದ್ದ ಅಳಿಯ ಕೆಲಸ ಮಾಡುತ್ತಿದ್ದ ಹೋಟೆಲನ್ನು ಬಿಟ್ಟು ತನ್ನದೇ ಸ್ವಂತದ್ದೊಂದು ತೆಗೆದಿದ್ದ. ಆ ಚಿಕ್ಕ ಹೋಟೆಲಿನಲ್ಲಿ ಅಡುಗೆ ಮನೆ ಉಸ್ತುವಾರಿ ಮಗಳದ್ದೇ. ಹೇಗೋ ನಡೆಯುತಿತ್ತು. ಹಾಗಾಗಿ ಎರಡು ದಿನಕ್ಕಿಂತ ಹೆಚ್ಚು ಅದನ್ನು ಬಿಟ್ಟು ಬರುವ ಹಾಗಿರಲಿಲ್ಲ. ತಮ್ಮನ ಡೌಲನ್ನು ಅವಳೂ ಕೇಳಿ ತಿಳಿದಿದ್ದಾಳೆ. ಒಂದೆರಡು ದಿನ ಅವನೊಟ್ಟಿಗೆ ಇರಬೇಕು. ಅವನೊಂದಿಗೆ ಮಾತನಾಡುತ್ತ ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಳ್ಳಬೇಕು ಎಂದು ಬಯಸಿದ್ದೂ ಇದೆ. 'ಅಪ್ಪನನ್ನು ಹೀಗೇ ಬಿಡಬೇಡ ಸ್ವಲ್ಪ ನೋಡಿಕೋ' ಎಂದು ಅವನಿಗೆ ಹೇಳಬೇಕು ಎನ್ನುವ ಆಸೆ ಅವಳಿಗೆ. ಆದರೆ ಆಕೆ ಬಂದಾಗ ಅವ ಸಿಗಬೇಕಲ್ಲ. ಅಷ್ಟೇ ಅಲ್ಲ ಊರಿಗೆ ಬಂದಾಗ ಅಪ್ಪಿ ತಪ್ಪಿಯೂ ಅರ್ಧ ಗಂಟೆ ಪ್ರಯಾಣದ ಆ ಅಕ್ಕನ ಮನೆಗೆ ಹೋದವನೇ ಅಲ್ಲ ಅವನು.

***

ವಯಸ್ಸಾದ್ದರಿಂದ ಮೊದಲಿನ ಹಾಗೆ ನಡೆಯಲು ಆಗುವುದಿಲ್ಲ. ಊಟ ಮಾಡಲೂ. ಆದರೂ ವೆಂಕಪ್ಪಯ್ಯ ಬ್ರಾಹ್ಮಣಾರ್ಥಕ್ಕೆ ಹೋಗುವುದನ್ನು ಬಿಟ್ಟಿಲ್ಲ ಇನ್ನೂ. ಮಗ ಆಗೀಗ ತಾಯಿಯನ್ನು ಬಿಟ್ಟು ಹೋಗಲಿಕ್ಕೆ ಬರುವಾಗ ಅವಳ ಕೈಮೇಲೆ ಹಾಕುತ್ತಿದ್ದ ಚೂರು ಪಾರು ಹಣ ಮತ್ತು ಮಗಳು ಬರುವಾಗ ಹೋಟೆಲಿಗೆ ತಂದದ್ದರಲ್ಲಿಯೇ ಬಟ್ಟೆ ಗಂಟುಗಳಲ್ಲಿ ತರುತ್ತಿದ್ದ ಅಲ್ಪ ಸ್ವಲ್ಪ ಅಕ್ಕಿ ಬೇಳೆ ಬಡತನದಲ್ಲಿಯೇ ಬೆಳೆದಿದ್ದ ವೆಂಕಪ್ಪಯ್ಯನಿಗೆ ಖಂಡಿತ ಸಾಕು. ಆದರೆ ಸಮಯ ಕಳೆಯಬೇಕಲ್ಲ. ಅಭ್ಯಾಸ ಬಲ ಬೇರೆ. ಹಗಲು ಹೇಗೋ ಕಳೆಯುವ